**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ, ಮೂಡಿಗೆರೆ</u>**

**<u>ಸಿ.ಸಿ.ನಂಃ 288/2019</u>**

**ಫಿರ್ಯಾದುದಾರಃ** ಪಿ.ಸುಬ್ರಮಣ್ಯ ರಾವ್
ಬಿನ್ ಪಿ. ವೆಂಕಟರಾವ್,
ವಯಸ್ಸು ಸುಮಾರು 44 ವರ್ಷ,
ವಾಸಃ ಕೆ.ಎಂ.ರಸ್ತೆ, ಕಳಸ,
ಕಳಸ ಹೋಬಳಿ ಮತ್ತು ಅಂಚೆ,
ಮೂಡಿಗೆರೆ ತಾಲ್ಲೂಕು.

**ವಿರುದ್ಧ**

**ಆರೋಪಿಃ** ಕುಮಾರ ಸ್ವಾಮಿ ಎನ್.
ಬಿನ್ ನರಸಿಂಹಮೂರ್ತಿ,
ವಯಸ್ಸು ಸುಮಾರು 43 ವರ್ಷ,
ವಾಸಃ ಕೆಳಮಾಗಲು, ಕಳಸ ಹೋಬಳಿ,
ಮತ್ತು ಅಂಚೆ, ಮೂಡಿಗೆರೆ ತಾಲ್ಲೂಕು.

*****

**<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿ ಹೇಳಿಕೆ</u>**

ಪ್ರಶ್ನೆ.1) ಫಿರ್ಯಾದುದಾರರ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಆರೋಪಿಯ ಉತ್ತರಃ

ಪ್ರಶ್ನೆ.2) ಫಾಸಾ-1 ಪಿ. ಸುಬ್ರಮಣ್ಯ ರಾವ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಯಾದ ನೀವು ನಿಮ್ಮ ಕುಟುಂಬದ ತುರ್ತು ಹಣದ ಅವಶ್ಯಕತೆಗಳಿಗೋಸ್ಕರ ಫಿರ್ಯಾದಿಯಿಂದ 10,00,000/- ರೂಪಾಯಿಗಳನ್ನು ಸಾಲವಾಗಿ ಪಡೆದಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ

ಪ್ರಶ್ನೆ.3) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಸದರಿ ಹಣದ ಮರುಪಾವತಿ ಮಾಡುವ ಸಲುವಾಗಿ ನಿಮ್ಮ ಖಾತೆ ಹೊಂದಿರುವ ಸಿಂಡಿಕೇಟ್ ಬ್ಯಾಂಕ್, ಕಳಸ ಶಾಖೆಯ ಚೆಕ್ ನಂ.044923, ದಿನಾಂಕಃ 18.06.2018, ರೂ.10,00,000/- ಎಂದು ನಮೂದಿಸಿ ನೀಡಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ

ಪ್ರಶ್ನೆ.4)ಪಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿ ಚೆಕ್ಕನ್ನು ಅವರ ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕಳಸ ಶಾಖೆಯಲ್ಲಿ ನಗದೀಕರಣಕ್ಕೆ ಹಾಜರುಪಡಿಸಿದ್ದು, ಆದರೆ ಸದರಿ ಚೆಕ್ಕು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂದು ದಿನಾಂಕಃ 21.08.2018 ರಂದು ಹಿಂದಿರುಗಿಸಿರುತ್ತಾರೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ

ಪ್ರಶ್ನೆ.5) ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ದಿನಾಂಕಃ 29.08.2018 ರಂದು ನಿಮಗೆ ಕಾನೂನುಬದ್ಧ ನೋಟೀಸು ನೀಡಿದ್ದು, ಸದರಿ ನೋಟೀಸನ್ನು ನೀವು ಸ್ವೀಕರಿಸಿದ್ದರೂ ಸಹ ಹಣವನ್ನು ಪಾವತಿ ಮಾಡಿರುವುದಿಲ್ಲ ಮತ್ತು ಆ ನೋಟೀಸಿಗೆ ಯಾವುದೇ ಉತ್ತರ ನೀಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ

ಪ್ರಶ್ನೆ.6) ಫ್ರಾಸಾ-2 ಮಂಜುನಾಥ್ ರವರು ತಮ್ಮ ಸಾಕ್ಷ್ಯದಲ್ಲಿ ನಂತರ ನಿಪಿ-1 ರ ಚೆಕ್ ನಲ್ಲಿ ನಮೂದಿಸಿರುವ ಅಕೌಂಟ್ ಕುಮಾರಸ್ವಾಮಿ ಎಂಬುವವರ ಹೆಸರಿನಲ್ಲಿದ್ದು, ಸದರಿ ಚೆಕ್ಕು ಅವರ ಶಾಖೆಗೆ ಸೇರಿದ್ದು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ

ಪ್ರಶ್ನೆ.7) ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿಪಿ-7 ರ ಅಕೌಂಟ್ ಸ್ಟೇಟ್ಮೆಂಟ್ ಆರೋಪಿಯಾದ ತಮ್ಮ ಖಾತೆಗೆ ಸೇರಿದು ಹಾಗೂ ನಿಪಿ-7 ರ ಪ್ರಕಾರ 21.08.2018 ರಂದು ನಿಪಿ-1 ರ ಚೆಕ್ಕನ್ನು ಹಾಜರುಪಡಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ನಗದೀಕರಣವಾಗಿರುವುದಿಲ್ಲ ಮತ್ತು ಹಿಂಬರಹವನ್ನು ನೀಡುವಾಗ ಚೆಕ್ಕು ನೀಡಿದವರ ಖಾತೆಯಲ್ಲಿನ ಹಣವನ್ನು ಪರಿಶೀಲಿಸಲಾಗುವುದು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು?

ಆರೋಪಿಯ ಉತ್ತರಃ

ಪ್ರಶ್ನೆ.8) ನಿಮ್ಮಗೆ ಈ ಪ್ರಕರಣದ ಬಗ್ಗೆ ನ್ಯಾಯಾಲಯಕ್ಕೆ ಏನಾದರೂ ಹೇಳುವುದು ಇದೆಯೇ ?

ಆರೋಪಿಯ ಉತ್ತರಃ

ಪ್ರಶ್ನೆ.9) ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

ಆರೋಪಿಯ ಉತ್ತರಃ

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೆನೆಂದು ಧೃಡಿಕರಿಸುತ್ತೇನೆ )

Sd/-

(ವಿಶ್ವನಾಥ್ ಎ.)

ಸ್ಥಳಃ ಮೂಡಿಗೆರೆ
ದಿನಾಂಕಃ 05.03.2024

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ., ಮೂಡಿಗೆರೆ.

ಆರೋಪಿಯ ಸಹಿಃ